ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ತಮ್ಮ ಕ್ಷೇತ್ರವಾದಂಥ ಹೊಸನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದೆಯೆಂಬುದನ್ನು ಬಹಳ ಕಳಕಳಿಯಿಂದ ವ್ಯಕ್ತಪಡಿಸಿದ್ದಾರೆ. ಈಗಾಗಲೇ ನಾವು ಆಲ್ಲಿರತಕ್ಕ ಜನಸಂಖ್ಯೆಯ ಆಧಾರದ ಮೇಲೆ ೧೦ ಲಕ್ಷ ರೂಪಾಯಿಗಳ ಸ್ಕೀಮನ್ನೂ ಕೂಡ ಪ್ರಿಪೇರ್ ಮಾಡಿದ್ದೇವೆ. ಇದರ ಬಗ್ಗೆ ದಿನಾಂಕ ೨೭-೨-೧೯೮೦ಕ್ಕೆ ಮುನಿಸಿಪಲ್ ಅಧ್ಯಕ್ಷರಿಗೆ ಪತ್ರ ಬರೆದಿದ್ದೇವೆ. ಆದರೆ ಇಲ್ಲಿಯವರೆಗೆ ಮುನಿಸಿಪಲ್ ಅಧ್ಯಕ್ಷರು ೧೦ ಪರ್ಸೆಂಟ್ ಕೊಡುವುದಕ್ಕೆ ಆಗುತ್ತದೆ ಎಂದಾಗಲೀ ಅಥವಾ ಫೈನಾನ್ಷಿಯಲ್ ಪೊಜಿಷನ್ ಚೆನ್ನಾಗಿಲ್ಲವೆಂದು ಆಗಲಿ ಪತ್ರದ ಮೂಲಕ ನಮಗೆ ತಿಳಿಸಿಲ್ಲ. ಆದರೂ ಕೂಡ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕೇಳಿಕೊಳ್ಳುತ್ತಾ ಇದ್ದೇನೆ, ನೀವು ಆ ಮತ ಕ್ಷೇತ್ರವನ್ನು ಪ್ರತಿನಿಧಿಸುತ್ತಾ ಇದ್ದೀರಿ, ಆದಕಾರಣ ತಾವು ಮುನಿಸಿಪಲ್ ಅಧ್ಯಕ್ಷರಿಗೆ ಹೇಳಿ. ಆವರಿಂದ ಒಂದು ಪತ್ರ ಬರಲಿ, ೧೦ ಪರ್ಸೆಂಟ್ ಹಣ ಕೊಡುವುದಕ್ಕೆ ಸಾಧ್ಯವಿಲ್ಲದೇ ಹೋದರೆ ಡೆವಲಪ್‌ಮೆಂಟ್ ಗ್ರಾಂಟ್‌ನಲ್ಲಿ ಎಮರ್ಜೆನ್ಸಿ ವಾಟರ್ ಸಪ್ಲೈ ಸ್ಕೀಂ ಎಂದು ಟ್ರೀಟ್ ಮಾಡಿ ಕೊಡತಕ್ಕ ಪ್ರಯತ್ನ ಮಾಡುತ್ತೇವೆ. ಆಲ್ಲಿ ಬೋರ್‌ವೆಲ್ ಕೂಡ ಹಾಕತಕ್ಕ ಪರಿಸ್ಥಿತಿ ಇಲ್ಲ. ಏಕೆಂದರೆ ಆಲ್ಲಿಗೆ ಒಂದೂವರೆ ಕಿಲೋಮೀಟರ್ ದೂರದಲ್ಲಿ ಕಲ್ಲಹಳ್ಳಿ ಎಂಬ ಯೋಜನೆ ತಯಾರಾಗಿದೆ. ತಾವು ಮುನಿಸಿಪಲ್ ಅಧ್ಯಕ್ಷರಿಗೆ ಹೇಳಿ, ಆವರು ಈ ಸ್ಕೀಂಗೆ ಒಪ್ಪುತ್ತೇವೆ ಎಂದು ಪತ್ರ ಬರೆದರೆ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇಡೀ ಕ್ಷೇತ್ರದ ಪ್ರತಿನಿಧಿಯಾಗಿ ನಾನು ಹೇಳುತ್ತಾ ಇದ್ದೇನೆ, ಇಡೀ ಹೊಸನಗರ ತಾಲೂಕಿನಲ್ಲಿ ಆವರಿಸಿಕೊಂಡಿದೆ. ೧೦ ವರ್ಷಗಳ ಹಿಂದೆ ಇದ್ದಂಥ ಉತ್ಪತ್ತಿಯಲ್ಲಿ ಇವತ್ತು ಆದರ ಕಾಲಂಶ ಕೂಡ ಉತ್ಪತ್ತಿ ಇಲ್ಲ. ಇದನ್ನು ಸ್ಪೆಷಲ್ ಕೇಸಾಗಿ ತೆಗೆದುಕೊಂಡು ಸರ್ಕಾರ ಆನುದಾನ ಕೊಟ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಈ ಬಗ್ಗೆ ಮುನಿಸಿಪಲ್ ಅಧ್ಯಕ್ಷರು ನನಗೆ ಹೇಳಿರುವುದರಿಂದ ನಾನು ಈ ಗಮನ ಸೆಳೆಯುವ ಸೂಚನೆಯನ್ನು ಕೇಳಿಸಿಕೊಟ್ಟಿರುವುದು. ನಾನು ಆ ಕ್ಷೇತ್ರದ ಪ್ರತಿನಿಧಿಯಾಗಿ ಹೇಳುತ್ತಿರುವಾಗ ಪುನಃ ಪತ್ರ ಏಕೆ ಬೇಕು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮುನಿಸಿಪಲ್ ಅಧ್ಯಕ್ಷರಿಗೆ ಪತ್ರ ಬರೆಯಲಿಕ್ಕೆ ಹೇಳಿ, ಆವರಿಂದ ಪತ್ರ ಬಂದ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಂಡು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮುನಿಸಿಪಾಲಿಟಿಗೆ ೧೦ ಪರ್ಸೆಂಟ್ ಹಣ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಒಂದು ವೇಳೆ ೧೦ ಪರ್ಸೆಂಟ್ ಹಣ ಕೊಡುವುದಕ್ಕೆ ಸಾಧ್ಯವಿಲ್ಲದೇ ಹೋದರೆ ನಾವು ಡೆವಲಪ್‌ಮೆಂಟ್ ಗ್ರಾಂಟ್‌ನಲ್ಲಿ ಕೊಡುತ್ತೇವೆಂದು ಹೇಳಿದ್ದೇನೆ. ನಾವು ದಿನಾಂಕ ೨೭-೨-೧೯೮೦ ರಂದು ಮುನಿಸಿಪಲ್ ಅಧ್ಯಕ್ಷರಿಗೆ ಪತ್ರ ಬರೆದಿದ್ದೇವೆ, ಆದಕ್ಕೆ ಉತ್ತರ ಬರಲಿ, ಆವರಿಗೆ ೧೦ ಪರ್ಸೆಂಟ್ ಕೊಡುವುದಕ್ಕೆ ಆಗದಿದ್ದ ಪಕ್ಷದಲ್ಲಿ ಡೆವಲಪ್‌ಮೆಂಟ್ ಗ್ರಾಂಟ್‌ನಲ್ಲಿ ನಾವು ಹಣ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ ಮತ್ತು ಪುತ್ತ ಸ್ಕೀಮನ್ನು ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ, ಸವದತ್ತಿ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ೧೦೦ ದಿನಗಳ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಆದ ಹಣದ ಆವಶ್ಯಯ ಮತ್ತು ಆ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಆದಂಥ ಅಡಚಣೆ ಹಾಗೂ ನಿಷ್ಕ್ರಿಯತೆ ಬಗ್ಗೆ ತಮ್ಮ ಮುಖಾಂತರ ಮಾನ್ಯ ಹಣಕಾಸಿನ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—(ಆರ್ಥಿಕ ಹಾಗೂ ಯೋಜನಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕೆಳಕಂಡ ಸ್ಟೇಟ್‌ಮೆಂಟನ್ನು ಮಾಡುವುದಕ್ಕೆ ತಮ್ಮ ಅನುಮತಿಯೆನ್ನು ಕೋರುತ್ತೇನೆ.

Employment Affirmation Scheme was taken up in the blocks of Soundatti, Bailahongal and Ramdurg in Belgaum district during 1979

for a period of 100 days from March to some time in June 1979. The financial progress of the Scheme in respect of Soundatti taluk is given below.—

(in Rupees)

Name of the Block	Total allotments			Total expenditure		
	Cash component	Foodgrains component.	Total	Cash component	Foodgrains component	Total
1	2	3	4	5	6	7
SOUNDATTI	11,13,428	5,93,590	17,07,018	11,01,895	5,93,590	16,95,485

On the basis of doubts and complaints received regarding unsatisfactory implementation of the scheme in the block, enquiries were conducted and spot inspections were made by the Deputy Commissioner, Belgaum, Assistant Commissioner, Bailahongal as well as the District Development Assistant to the Deputy Commissioner, Belgaum. Quite a number of lapses and irregularities on the part of the Block Development officer and the Junior Engineer were noticed by the inspecting officers including the Deputy Commissioner, Belgaum. On the basis of this, the Junior Engineer has been suspended by the Deputy Commissioner on 27-10-1979 pending further enquiry in the matter. The Block Development Officer, Soundatti has also been suspended by the Divisional Commissioner, Belgaum on 8 11-1979. He was relieved of his duties on 12-11 1979 and recently a substitute has been posted in his place who has already joined duty.

Government is aware that some amount of bungling and misuse and mis appropriation of funds (both cash and food component) have been taken place in the Soundatti block under EAS implementation andthe B.D.O. and the Junior Engineer, on the basis of preliminary enquiry reports it appears, were responsible for and involved in this.

Both the officials have already been suspended and are being proceeded against. Government will take suitable further action regarding further enquiry in the case and suitable action will be taken against the concerned officials if proved guilty.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಮಂತ್ರಿಗಳವರು ಈ ವಿಚಾರದಲ್ಲಿ ಸ್ಪಷ್ಟವಾಗಿ ಉತ್ತರ ಕೊಟ್ಟಿಲ್ಲ ೨೪ ನೂರು ಕ್ವಿಂಟಾಲ್ ಗೋಧಿಯನ್ನು ಇದೂವರೆಗೆ ಕೊಟ್ಟಿಲ್ಲ. ಮತ್ತೆ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಿದರೂ ಆಗ ಡೆಪ್ಯುಟಿ ಕಮಿಷನರ್‌ರವರಾಗಲೀ, ಅಸಿಸ್ಟೆಂಟ್ ಕಮಿಷನರ್‌ರವರಾಗಲೀ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ, ಲೆಕ್ಕ ಪತ್ರವನ್ನು ಪರಿಶೀಲನೆ ಮಾಡುವಂಥ ಕೆಲಸ ಮಾಡಲಿಲ್ಲ. ಅಲ್ಲಿಗೆ ಜನ ಬಂದು ಕಂಪ್ಲೇಟ್ ಕೊಟ್ಟಾದ ಮೇಲೆ ಅವರು ಕಣ್ಣು ತೆರೆದರು. ಅಲ್ಲಿಯವರೆಗೂ ಆ ಐ ಎ.ಎಸ್. ಅಧಿಕಾರಿಗಳಾರಿದ್ದಾರೆ ಅವರು ಏತಕ್ಕೆ ತಮ್ಮ ಕರ್ತವ್ಯವನ್ನು ಮಾಡಲಿಲ್ಲ ? ಇಷ್ಟು ಮಿಸ್ ಅಪ್ರೊಪ್ರಿಯೇಷನ್ ಆಗಬಹುದೆಂಬುದು ಗೊತ್ತಿದ್ದರೂ ಕೂಡ ಸರ್ಕಾರಿ ಅಧಿಕಾರಿಗಳು ಆಗಿದಾಗ್ಗೆ ಅಲ್ಲಿಗೆ ಹೋಗಿ ಏತಕ್ಕೆ ಲೆಕ್ಕ ಪತ್ರವನ್ನು ತಪಾಸಣೆ ಮಾಡಲಿಲ್ಲ ? ಇವತ್ತು ಸರ್ಕಾರದವರೇ ' ಕೂಲಿಗಾಗಿ ಕಾಳು' ಎಂಬ ಯೋಜನೆ ಏನಿದೆ ಅದು ಬಹಳ ಸ್ತುತ್ಯವಾದ ಯೋಜನೆ. ಅದನ್ನು ಸರ್ಕಾರ ಮಾಡಿದ್ದು ಒಂದು ವರ ಪ್ರಸಾದ ಇದ್ದಹಾಗಿದೆ ಮತ್ತು ಸಂಜೀವಿನಿ ಇದ್ದ ಹಾಗೆ ಇದೆ. ಅಂಥಾ ಯೋಜನೆಯಲ್ಲಿ ಮಿಸ್ ಅಪ್ರೊಪ್ರಿಯೇಷನ್ ಆಗಿದೆಯೆಂದು ಕಂಪ್ಲೇಂಟ್ ಬಂದ ಮೇಲೆಯೇ ಅವರು ಅಲ್ಲಿಯ ಬ್ಲಾಕ್ ಡೆವಲಪ್ ಮೆಂಟ್ ಆಫೀಸರ್‌ರವರನ್ನು ಮತ್ತು ಜೂನಿಯರ್ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡಿದ್ದಾರೆ. ಇದಕ್ಕಿಂತಲೂ ಮುಂಚಿತವಾಗಿ ಅವರು ಏತಕ್ಕೆ ಇನ್ಸ್‌ಪೆಕ್ಷನ್ ಮಾಡಲು ಹೋಗಲಿಲ್ಲ ? ಅವರ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತು ಏರಡನೆಯದಾಗಿ ಅಲ್ಲಿಗೆ ಫುಡ್‌ಗ್ರೇನ್ಸ್ ಇಲ್ಲಿಯವರೆಗೂ ಕಳುಹಿಸದೇ ಇರುವುದರಿಂದ ಆದಷ್ಟು ಬೇಗ ಆದನ್ನು ಕಳುಹಿಸುವ ಏರ್ಪಾಡು ಮಾಡುತ್ತೀರಾ ? ಎಂದು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ,— ಮಾನ್ಯ ಅಧ್ಯಕ್ಷರೇ, ಕಾಳನ್ನು ಕೆಲಸ ಮಾಡಿದವರಿಗೆ ಪಂಚುವ ವಿಚಾರದಲ್ಲಿ ತಕ್ಷಣವೇ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದಷ್ಟು ಜಾಗ್ರತೆ ಆದನ್ನು ಹಂಚುವ ಏರ್ಪಾಡು ಮಾಡುತ್ತೇನೆ. ಇನ್ನು ತಾವು ಹೇಳಿದ ಹಾಗೆ ಇದು ಬಹಳ ಉತ್ತಮವಾದ ಯೋಜನೆ, ಆದರೆ ಇದನ್ನು ಜಾರಿಗೊಳಿಸುವಲ್ಲಿ ಸಾಕಷ್ಟು ಲೋಪದೋಷಗಳು ನಡೆದಿದೆ ಮತ್ತು ಹಣ ಕೂಡ ದುರುಪ ಯೋಗವಾಗಿದೆ ಎಂಬುದು ಅನೇಕ ಕಡೆಗಳಿಂದ ನಮಗೆ ವರ್ತಮಾನ ಬಂದಿದೆ. ಇದು ಸವದತ್ತಿಯಲ್ಲಿ ಒಂದೇ ಕಡೆಯಲ್ಲಿ ಅಲ್ಲ ಅನೇಕ ಕಡೆಗಳಿಂದಲೂ ಇದರ ಬಗ್ಗೆ ದೂರುಗಳು ಬಂದಿದೆ. ಆದುದರಿಂದ ಇದರ ಬಗ್ಗೆ ನಾಳೆಯೇ ಸಂಬಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಲು ಸಭೆ ಕರೆದಿದ್ದೇನೆ. ಜಿಲ್ಲಾಧಿಕಾರಿ ಗಳವರು ಆಡಿಟ್ ಸ್ಟಾಫ್‌ವಾಡ್‌ನವರಿಗೆ ತಿಳಿಸಿ ಈ ಕಾರ್ಯಕ್ರಮ ಸರಿಯಾಗಿ ಜಾರಿಗೆ ತರುವ ಹಾಗೆ ವ್ಯವಸ್ಥೆ ಮಾಡುತ್ತೇನೆ ಮತ್ತು ಹಣ ದುರುಪಯೋಗವಾಗದ ಹಾಗೆ ಕೂಡ ವ್ಯವಸ್ಥೆ ಮಾಡುತ್ತೇನೆ. ಈ ರೀತಿ ಮುಂದೆ ಲೋಪದೋಷಗಳು ಆಗದ ರೀತಿ ತಡೆಗಟ್ಟುವುದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ಖಂಡಿತ ವಾಗಿಯೂ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ಕೆ. ತಕೇಡ್.—ಇವತ್ತು ಡಿವಿಜನಲ್ ಕಮಿಷನರ್‌ರವರಾಗಲೀ, ಡೆಪ್ಯುಟಿ ಕಮಿಷನರ್‌ರವ ರಾಗಲೀ ಅಥವಾ ಅಸಿಸ್ಟೆಂಟ್ ಕಮಿಷನರ್‌ರವರಾಗಲೀ ಈ ಲೆಕ್ಕಪತ್ರಗಳನ್ನು ತಪಾಸಣೆ ಮಾಡುವ ಕಾರ್ಯ ದಲ್ಲಿ ನೆಗ್ಲಿಜೆಂಟ್ ಆಗಿದ್ದರಿಂದ ಈ ರೀತಿ ಮಿಸ್ ಅಪ್ರೊಪ್ರಿಯೇಷನ್ ಆಗುವುದಕ್ಕೆ ಸಾಧ್ಯವಾಗಿದೆ. ಆದುದ ರಿಂದ ಅವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಇವತ್ತು, ಒನೇ ತರಗತಿಯೋ, ಇಲ್ಲ ಲನೇ ತರಗತಿ ಓದಿದ ವರ್ಕ್ ಇನ್ಸ್‌ಪೆಕ್ಟರ್ ಒಬ್ಬರು ಇಂಥಾ ಮಹತ್ವವಾದ ಯೋಜನೆಯನ್ನು ಕಾರ್ಯ ರೂಪಕ್ಕೆ ತರಬೇಕಾಗಿದೆ. ಡೆಪ್ಯುಟಿ ಕಮಿಷನರ್‌ರವರಾಗಲೀ ಅಥವಾ ಡಿವಿಜನಲ್ ಕಮಿಷನರ್ ರಾಗಲೀ ಇಲ್ಲವೇ ಅಸಿಸ್ಟೆಂಟ್ ಕಮಿಷನರ್‌ರವರಾಗಲೀ ಇಂಥಾ ಮಹತ್ವವಾದ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಒಬ್ಬ ಅರ್ಹರಾದಂಥವರನ್ನು ಅಪಾಯಿಂಟ್ ಮಾಡಬೇಕೆಂದು ಹೇಳಿ ದ್ದಿರೋ ಇಲ್ಲವೋ ? ಹಾಗೆ ಹೇಳಿದ್ದೂ ಅವರು ಆ ರೀತಿ ಅಪಾಯಿಂಟ್ ಮಾಡಿರದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಈಗಾಗಲೇ ಅರ್ಥ ಮಂತ್ರಿಗಳವರು ಹೇಳಿದಂತೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ಕೊಡುವಾಗ ಅನೇಕ ಕಡೆಗಳಿಂದ ಇದರ ಬಗ್ಗೆ ಆಪಾದನೆಗಳು ಬಂದಿವೆ.

ನಿಜವಾಗಿಯೂ ಈ ಯೋಜನೆಯ ಲಾಭ ಸಾಮಾನ್ಯ ಜನತೆಗೆ ಮುಟ್ಟುತ್ತಿಲ್ಲ. ಇದೇ ಯೋಜನೆಯನ್ನು ತಮಿಳುನಾಡಿನಲ್ಲಿ ಮತ್ತು ಗುಜರಾತ್ ಮತ್ತಿತರ ರಾಜ್ಯಗಳಲ್ಲಿಯೂ ಸಹ ಆಚರಣೆಗೆ ತಂದಿದ್ದಾರೆ. ತಮಿಳುನಾಡಿನಲ್ಲಿ ಯಾವ ರೀತಿ ಮಾಡಿದ್ದಾರೆಂದರೆ ೧೮ ವರ್ಷ ವಯಸ್ಸಿನ ಮೇಲೆ ಇರತಕ್ಕಂಥ ಎಲ್ಲಾ ಕೃಷಿ ಕಾರ್ಮಿಕರ ರಿಜಿಸ್ಟರ್ ಒಂದನ್ನು ಮೆಯಿಂಟೇನ್ ಮಾಡಿ ಅವರು ಕೆಲಸ ಮಾಡಿದ ದಿವಸ ಅವರಿಗೆ ಇಷ್ಟು ಆಹಾರಧಾನ್ಯ, ಇಲ್ಲವೇ ಇಷ್ಟು ಹಣ ಕೊಡುವುದು ಎಂದು ಸರಿಯಾಗಿ ನಿಗದಿ ಮಾಡಿ ಬಿಟ್ಟಿದ್ದಾರೆ. ಇದರಿಂದ ಅಲ್ಲಿ ಮೋಸ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಇದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದಾರೆ, ಆದುದರಿಂದ, ತಾವು ನಾಳೆ ದಿವಸ ಅಧಿಕಾರಿಗಳ ಸಭೆಯನ್ನು ಹೇಗೂ ಕರೆದಿದ್ದೀರಿ, ಆಗ, ಈ ಯೋಜನೆಯನ್ನು ಆಚರಣೆಯಲ್ಲಿ ತರುವಾಗ ಉಂಟಾಗತಕ್ಕ ದೋಷಗಳನ್ನು ತೆಗೆದು ಯಾವ ರೀತಿಯಾಗಿ ಪರಿಣಾಮಕಾರಿಯಾದ ರೀತಿಯಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ಲಕ್ಷ್ಯಕ್ಕೆ ತೆಗೆದು ಕೊಂಡು ಏನಾದರೂ ಮಾರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ದಿವಾಕರ್.—ಸ್ವಾಮಿ, ಹುಡ್ಕೋ ಯೋಜನೆ ಮುಖಾಂತರ ಮನೆಗಳನ್ನು ಕಟ್ಟುವ ಕೆಲಸವನ್ನು ಮತ್ತು ೨೦/೩೦ ಲಕ್ಷ ರೂಪಾಯಿಗಳ ಈ ''ಕೂಲಿಗಾಗಿ ಕಾಳು'' ಯೋಜನೆಯನ್ನು ಒಬ್ಬ ಜೆ. ಇ. ನೋಡಿಕೊಳ್ಳುವುದಕ್ಕೆ ಆಗುವುದಿಲ್ಲ, ಆದುದರಿಂದ ಇನ್ನು ಒಬ್ಬಿಬ್ಬರು ಜೆ. ಇ. ಮತ್ತು ಒಬ್ಬರು ಅಸಿಸ್ಟೆಂಟ್ ಇಂಜಿನಿಯರ್‌ರವರನ್ನು ಒಂದೊಂದು ತಾಲ್ಲೂಕಿಗೆ ಪೋಸ್ಟ್ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ? ಸ್ವಾಮಿ. ಆಗ ನಮ್ಮ ಸರ್ಕಾರದ ಈ ಎಲ್ಲ ಯೋಜನೆಗಳನ್ನು ಯಶಸ್ವಿಯಾಗಿ ಜಾರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ.

೨-೦೦ ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಉದ್ಯೋಗ ದೃಢೀಕರಣ ಯೋಜನೆಯನ್ನು ಬಹಳ ಪ್ರಾಮಾಣಿಕವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾದರೆ ಸಾಕಷ್ಟು ಸಾಂಸ್ಥಿಕವಾದ ಮತ್ತು ಆಡಳಿತಾತ್ಮಕವಾದ ಬದಲಾವಣೆಗಳನ್ನು ಮಾಡಬೇಕಾದ ಅವಶ್ಯಕತೆ ಇದೆ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಹೇಳಿದ ಹಾಗೆ ತಮಿಳ್ನಾಡಿನಲ್ಲಿ ಹಾಗೂ ಮತ್ತಿತರ ರಾಜ್ಯಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿ ಮಾಡುವಲ್ಲಿ ಉಪಯುಕ್ತವಾದ ಕ್ರಮವನ್ನು ಅನುಸರಿಸುತ್ತಿದ್ದರೆ ಅದನ್ನು ನಾವು ಕೂಡ ಆಳವಡಿಸಿಕೊಳ್ಳುವುದರಲ್ಲಿ ಏನು ತೊಂದರೆಯಾಗುವುದಿಲ್ಲ. ಖಂಡಿತವಾಗಿ ನಾನು ಆ ಸಲಹೆಯನ್ನು ಗಮನದಲ್ಲಿ ತಂದುಕೊಳ್ಳುತ್ತೇನೆ. ಮಾನ್ಯ ತಕ್ಕೇಡ್‌ರವರು ಈ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳೂ ಕೂಡ ಜಾಗ್ರತೆ ವಹಿಸಬೇಕೆಂದರು. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಸುವುದಕ್ಕೆ ಮುಖ್ಯವಾಗಿ ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಅವರು ಈ ಬಗ್ಗೆ ಎಷ್ಟರ ಮಟ್ಟಿಗೆ ಜವಾಬ್ದಾರಿ ತೆಗೆದುಕೊಂಡಿದ್ದಾರೆಂಬುದನ್ನು ವಿಚಾರ ಮಾಡೋಣ. ಏಕೆಂದರೆ, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವ ಯೋಜನೆಯನ್ನು ಸರಿಯಾಗಿ ಜಾರಿ ಮಾಡುವ ಮುತ್ಸದ್ದಿತನ ಜಿಲ್ಲಾಧಿಕಾರಿಗಳಿಗೆ ಹಾಗೂ ಇತರ ಎಲ್ಲ ಅಧಿಕಾರಿಗಳಿಗೂ ಬೇಕು. ಮಾನ್ಯ ಕಡಿದಾಳ್ ದಿವಾಕರ್‌ರವರು ತಾಲ್ಲೂಕು ಮಟ್ಟದಲ್ಲಿ ಸಾಕಷ್ಟು ಅಧಿಕಾರಿಗಳ ವ್ಯವಸ್ಥೆ ಇಲ್ಲವೆಂದರು. ಅಲ್ಲಿ ಲೋಪ ದೋಷಗಳಿವೆಯೆಂದು ದೂರುಗಳು ಇರುವುದರಿಂದ ಆ ವ್ಯವಸ್ಥೆಯನ್ನು ಪುನರ್‌ರಚನೆ ಮಾಡುವ ಅವಶ್ಯಕತೆ ಇದೆ. ಆದ್ದರಿಂದ ಅದನ್ನು ಖಂಡಿತವಾಗಿ ಗಮನಕ್ಕೆ ತೆಗೆದುಕೊಂಡು ತಕ್ಕ ಕಾರ್ಯ ಕ್ರಮವನ್ನು ಮಾಡುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ತಕ್ಕೇಡ್‌ರವರು ಮಾತನಾಡಲು ಎದ್ದು ನಿಲ್ಲಲು ಮಾನ್ಯ ಅಧ್ಯಕ್ಷರು ಅದಕೆ ಅವಕಾಶ ಕೊಡದೆ ಮುಂದಿನ ವಿಷಯವನ್ನು ಪ್ರಸ್ತಾಪಿಸಲು ಕು॥ ಪ್ರಮೀಳ ಅವರನ್ನು ಕರೆದರು)

SRI G. K. TAKKED.—Sir.....

SRI M. C. NANAIAH.—Sir, hon. Member Sri Takked is defying the ruling of the Chair.

MR SPEAKER.—It is not fair on the part of the hon. Member to defy the rulings of the Chair. Now, we will take up the next item of the agenda *ie.*, matter under under Rule 312.